ದಿನಾಂಕಃ 23-11-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಲ್ ಎಮ್ ಎಸ್ ವಕೀಲರಿಂದಃ
ಪ್ರತಿವಾದಿ ನಂ.2 ರಿಂದ 5, 7 ಮತ್ತು 19 ರವರ ಪರವಾಗಿ

ನಮ್ಮ ಅಜ್ಜನ ಮೂಲ ಊರು ಅಕ್ಕಿಸಾಗರ ಎಂದರೆ ಸರಿ. ನನ್ನ ಅಜ್ಜ ಮತ್ತು ಮೊದಲನೆ ಪ್ರತಿವಾದಿ ಅಕ್ಕಿಸಾಗರದಲ್ಲಿ ಶೇತ್ಕಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ನಮ್ಮ ಅಜ್ಜ ಮತ್ತು ನನ್ನ ತಂದೆಗೆ ಅಕ್ಕಿಸಾಗರದಲ್ಲಿ ಸ್ವಂತ ಜಮೀನು ಇರಲಿಲ್ಲ ಎಂದರೆ ಸರಿ. ಅಕ್ಕಿಸಾಗರದಲ್ಲಿ ಜಮೀನಿನಲ್ಲಿ ಕೂಲಿ ಕೆಲಸ ಮಾಡುವುದರಿಂದ ಕುಟುಂಬದ ನಿರ್ವಹಣೆಗೆ ತೊಂದರೆಯಾಗಿದ್ದರಿಂದ ನನ್ನ ಅಜ್ಜ ಮತ್ತು ನನ್ನ ತಂದೆ ಗೋಕಾಕಕ್ಕೆ ಬಂದರು ಎಂದರೆ ಸರಿ. ಗೋಕಾಕದಲ್ಲಿಯೂ ಸಹ ನನ್ನ ತಂದೆ ಮತ್ತು ನನ್ನ ಅಜ್ಜ ಕೂಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆ ಮೊದಲನೆ ಪ್ರತಿವಾದಿ ಗೋಕಾಕದಲ್ಲಿ ಚಹಾ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಜ್ಜ ಮತ್ತು ನನ್ನ ತಂದೆ ಮೊದಲನೆ ಪ್ರತಿವಾದಿ ಗೋಕಾಕದಲ್ಲಿ ಬಟ್ಟೆ ವ್ಯಾಪಾರ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ನನ್ನ ಅಜ್ಜ ಮತ್ತು ನನ್ನ ತಂದೆ ಮೊದಲು ದಾವಾ ಐಟಮ ನಂ.5 ರಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಆಸ್ತಿಯಿಂದ ಯಾವುದೇ ಉತ್ಪನ್ನ ಇರಲಿಲ್ಲ ಎಂದರೆ ಸರಿ. ಮೊದಲು ಪ್ರಶಾಂತ ಲಾಡ್ಜ ಇದ್ದ ಜಾಗೆ ಮೂರು ಸಿ ಟಿ ಎಸ್ ನಂಬರ ಕೂಡಿ ಇತ್ತು.

2. ದಾವಾ ಐಟಮ ನಂ.25 ಈ ಮೊದಲು ಖುಲ್ಲಾ ಜಾಗೆಯಾಗಿದ್ದು ಅದನ್ನು ನಾನು ಮತ್ತು 10 ನೇ ಪ್ರತಿವಾದಿ 2014 ರಲ್ಲಿ ಕಿರಣ ಗಚ್ಚಿ ಎಂಬುವವರಿಗೆ ಮಾರಾಟ ಮಾಡಿದ್ದೇವು ಎಂದರೆ ಸರಿ. ಸದರಿ ಮಾರಾಟದ ಹಣವನ್ನು ನಾನು ಮತ್ತು 10 ನೇ ಪ್ರತಿವಾದಿ ಸಮಾನವಾಗಿ ಹಂಚಿಕೊಂಡಿದ್ದೇವೆ ಎಂದರೆ ಸರಿ. ದಾವಾ ಐಟಮ ನಂ.1 ಮತ್ತು 4 ನ್ನು ವಾದಿ ಮತ್ತು ಮೃತ 2 ನೇ ಪ್ರತಿವಾದಿ ಮಾರಾಟ ಮಾಡಿದ್ದು ನನಗೆ ಅದರಲ್ಲಿ ಯಾವುದೇ ಹಣ ನೀಡಿಲ್ಲ. ಪ್ರತಿವಾದಿ ನಂ.10 ದಾವಾ ಐಟಮ ನಂ.18 ನ್ನು 7 ನೇ ಪ್ರತಿವಾದಿಗೆ 2 ತಿಂಗಳ ಹಿಂದೆ ಮಾರಾಟ ಮಾಡಿರುತ್ತಾರೆ.

ಒ ಎಸ್ ನಂ.290/2012
ಡಿ.ಡಬ್ಲ್ಯೂ: 5 ಹಾಜರು

3. ಮೃತ 2 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಅಕ್ಕಿಸಾಗರದಿಂದ ಗೋಕಾಕಕ್ಕೆ ಬಂದ ನಂತರ ರಸ್ತೆ ಬದಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರು ಸಂತೆ ಇದ್ದ ದಿನ ಬೇರೆ ಊರುಗಳಿಗೆ ಹೋಗಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಮೊದಲಿಗೆ ಬಟ್ಟೆ ವ್ಯಾಪಾರ ಪ್ರಾರಂಬಿಸಿದ್ದು ಮೃತ 2 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಎಂದರೆ ಸರಿ. ಸದರಿ ವ್ಯಾಪಾರವನ್ನು ನೋಡಿಕೊಂಡು ನಾವು ಇನ್ನುಳಿದ ತಮ್ಮಂದಿರು ಬಟ್ಟೆ ವ್ಯಾಪಾರ ಪ್ರಾರಂಬಿಸಿದೇವು ಎಂದರೆ ಸರಿ. ನಮ್ಮ ಎಲ್ಲ ಅಣ್ಣ ತಮ್ಮಂದಿರ ಬಟ್ಟೆ ವ್ಯಾಪಾರವನ್ನು ಪಾಲುದಾರಿಕಾ ಅಡಿಯಲ್ಲಿ ನಡೆಸುತ್ತಾರೆ ಎಂದರೆ ಸಾಕ್ಷಿ ಬೇರೆ ಬೇರೆಯಾಗಿ ಪಾಲುದಾರಿಕೆಯಿಂದ ನಡೆಸುತ್ತಾರೆಂದು ನುಡಿದಿರುತ್ತಾರೆ. ನಾವು ಎಲ್ಲಾ ಅಣ್ಣ ತಮ್ಮಂದಿರು ನಮ್ಮ ನಮ್ಮಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಮಾರಾಟ ತೆರಿಗೆ ಮತ್ತು ಜಿ ಎಸ್ ಟಿ ತುಂಬುತ್ತೇವೆ ಎಂದರೆ ಸರಿ. ನಾವು ಎಲ್ಲ ಅಣ್ಣ ತಮ್ಮಂದಿರು ನಮ್ಮ ನಮ್ಮ ಸಾಲಕ್ಕೆ ವೈಯಕ್ತಿಕವಾಗಿ ಜವಾಬ್ದಾರರು ಎಂದರೆ ಸರಿ. ನಾವು ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದುದ್ದರಿಂದ ಅದರಲ್ಲಿ ಬೇರೆ ನಮ್ಮ ಅಣ್ಣ ತಮ್ಮಂದಿರು ಭಾಗವಹಿಸುವುದಿಲ್ಲ ಎಂದರೆ ಸರಿ.

4. ನನ್ನ ಮೃತ ತಮ್ಮ ಬಸವರಾಜ ಜೀವಂತ ಇದ್ದಾಗ ಯಾವುದೇ ಆಸ್ತಿ ಮಾಡಿರಲಿಲ್ಲ. ಈಗ 16 ನೇ ಪ್ರತಿವಾದಿ ಪಿ ಜಿ ಮಾಡಿಕೊಂಡಿರುತ್ತಾರೆ. 17 ನೇ ಪ್ರತಿವಾದಿಗೆ ಬುದ್ದಿ ಮಾಂಧ್ಯ ಇದ್ದು ಆತನಿಗೆ ವ್ಯವಹಾರ ಜ್ಞಾನ ಇಲ್ಲ ಎಂದರೆ ಸರಿಯಲ್ಲ.

10 ನೇ ಪ್ರತಿವಾದಿಯ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು, ಪ್ರತಿನಿಧಿಸಿಲ್ಲ, ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ